ತಿಳಿದು ಬಂದ ಕೂಡಲೇ ಅವತ್ತಿನ ಹಿಂದಿನ ರಾತ್ರಿಯೇ ಹಾಲಿನ ಸರಬರಾಜನ್ನು ಮಾಡುತ್ತಿದ್ದರು. ಅದೇರೀತಿ ನೀವು ಕೂಡ ಏತಕ್ಕೆ ಹಿಂದಿನ ದಿವಸವೇ ಸರಬರಾಜು ಮಾಡಬಾರದಿತ್ತು ? ತಾವು ನನಗೆ ಅವಕಾಶವನ್ನು ಮಾಡಿಕೊಟ್ಟರೆ ಇದನ್ನು ಸಾಬೀತು ಮಾಡಿ ತೋರಿಸುತ್ತೇನೆ. ಇಲ್ಲದೇ ಹೋದರೆ ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ.

ಮನವಿಗಳು

(i) ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ

ಶ್ರೀ ಧನಂಜಯ ಕುಮಾರ್ (ಮಂಗಳೂರು).—ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಶ್ವವಿದ್ಯಾಲಯದ ಸುಮಾರು ೩೦೦ ಜನ ಸ್ನಾತಕೋತ್ತರ ವಿದ್ಯಾರ್ಥಿಗಳು ಮುಷ್ಕರ ನಡೆಸುತ್ತಿರುವ ವಿಚಾರ ಬಹಳ ಗಂಭೀರವಾದುದು. ಕಳೆದ ಒಂದು ತಿಂಗಳಿಂದ ಅವರು ಮುಷ್ಕರ ಮಾಡುತ್ತಿದ್ದಾರೆ. ಅವರು ತಮ್ಮ ತರಗತಿಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದಾರೆ. ಆವರ ೨೦ ಬೇಡಿಕೆಗಳಲ್ಲಿ ಅತಿ ಪ್ರಮುಖವಾದುದು ಎಂದರೆ ಆ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಬದಲಾವಣೆ ಮಾಡ ಬೇಕೆಂದು ಒತ್ತಾಯ ಮಾಡುತ್ತಿರುವುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈಗ ಹಾಲಿ ಇರತಕ್ಕ ಉಪಕುಲಪತಿಗಳ ಅವಧಿ ಮುಗಿದಿದ್ದರೂ ಕೂಡ ಮತ್ತೆ ಅವರನ್ನೇ ಮುಂದು ವರಿಸುತ್ತಿದ್ದಾರೆ. ಮತ್ತು ಈ ಉಪಕುಲಪತಿಗಳು ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ವಿಫಲರಾಗಿದ್ದಾರೆ ಎಂಬುದು. ಇದು ಬಹುಶಃ ತಮಗೂ ಗೊತ್ತಿರಬಹುದು. ಈ ವಿಶ್ವವಿದ್ಯಾ ನಿಲಯ ಇರುವುದು ಕೊಣಾಜೆ ಎಂಬಲ್ಲಿ. ಇದು ಇರುವುದು ಮಂಗಳೂರು ನಗರದಿಂದ ಸುಮಾರು ೧೫ ಮೈಲಿ ದೂರದಲ್ಲಿ. ಅಲ್ಲಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಏನು ಕಳೆದ ಒಂದು ತಿಂಗಳಿಂದ ಮುಷ್ಕರ ಹೂಡಿದ್ದಾರೆ. ಅದು ಇಡೀ ಜಿಲ್ಲೆಯಲ್ಲೇ ಹರಡುವ ಸಂಭವ ಇದೆ. ಇಡೀ ಜಿಲ್ಲೆಯಲ್ಲಿರತಕ್ಕ ಎಲ್ಲಾ ಕಾಲೇಜಿನವರೂ ಕೂಡ ಮುಷ್ಕರ ಹೂಡುವ ವಿಚಾರ ಮಾಡಿದ್ದಾರೆ. ಮೊನ್ನೆ ೧೬ನೇ ತಾರೀಖು ಒಂದು ಸಾರಿ ಮುಷ್ಕರ ಮಾಡಿದ್ದಾರೆ. ಈಗ ಮತ್ತೆ ೨೩ ನೇ ತಾರೀಖಿನಿಂದ ಅನಿರ್ದಿಷ್ಟ ಕಾಲದವರೆಗೆ ಮುಷ್ಕರ ಹೂಡುವುದಾಗಿ ತಿಳಿದುಬಂದಿದೆ. ಆದರೆ ಸಿಂಡಿಕೇಟ್ ಸದಸ್ಯರು ಮತ್ತು ಉಪಕುಲಪತಿಗಳು ಏನು ಹೇಳುತ್ತಿದ್ದಾರೆಂದರೆ ಇಲ್ಲಿ ಯಾವ ತೊಂದರೆಯೂ ಇಲ್ಲ, ಎಲ್ಲವೂ ಸಂಗಮವಾಗಿ ನಡೆದುಕೊಂಡು ಹೋಗುತ್ತಿದೆ, ಯಾವುದೇ ರೀತಿ ಯಲ್ಲೂ ಯಾರಿಗೂ ತೊಂದರೆಯಾಗಿಲ್ಲ ಎಂದು ಪತ್ರಿಕೆಗಳ ಮೂಲಕ ಹೇಳಿಕೆ ಕೊಡುತ್ತಿದ್ದಾರೆ...

ಅಧ್ಯಕ್ಷರು.—ತಾವು ಭಾಷಣ ಮಾಡುವುದು ಬೇಡ.

ಶ್ರೀ ವಿ. ಧನಂಜಯ ಕುಮಾರ್.—ಈ ಉಪಕುಲಪತಿಗಳು ತಮ್ಮ ಆಫೀಸಿನಲ್ಲೇ ಗಟ್ಟಿಯಾಗಿ ಕೂತಿದ್ದಾರೆ. ಅಲ್ಲಿ ವಿದ್ಯಾರ್ಥಿಗಳ ಗತಿ ಏನು ಎಂಬುದನ್ನು ಹೋಗಿ ನೋಡಿಕೊಂಡು ಬಂದಿಲ್ಲ. ಆ ಸ್ಥಳಕ್ಕೆ ಈ ಉಪಕುಲಪತಿಗಳು ಕಳೆದ ೨ ತಿಂಗಳಿಂದಲೂ ಹೋಗಿಯೇ ಇಲ್ಲ. ನಾವು ೪-೫ ಜನ ಶಾಸಕರು ಆ ಮುಷ್ಕರ ಹೂಡಿರತಕ್ಕ ವಿದ್ಯಾರ್ಥಿಗಳ ಹತ್ತಿರ ಹೋಗಿ ಅವರೊಡನೆ ಮಾತನಾಡಿ ಕೊಂಡು ವಿಚಾರ ಏನೆಂಬುದನ್ನು ಕೇಳಿ ತಿಳಿದುಕೊಂಡು ಬಂದಿದ್ದೇವೆ.

ಅಧ್ಯಕ್ಷರು.—ತಮಗೆ ಎಷ್ಟು ಹೇಳಿದರೂ ಭಾಷಣವನ್ನೇ ಮಾಡಲು ಹೋಗುತ್ತಿದ್ದೀರಿ. ಇದು ಸರಿಯಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಸ್ವಾಮಿ ಕಳೆದ ೨ ತಿಂಗಳಿಂದ ಆ ಉಪಕುಲಪತಿಗಳು ಅಲ್ಲಿಗೆ ಹೋಗಿಯೇ ಇಲ್ಲವೆಂದು ಹೇಳುವುದಾದರೆ ಇದಕ್ಕೆ ನಾವು ಏನು ಹೇಳಬೇಕು ?

ಅಧ್ಯಕ್ಷರು.—ಹಿಂಸೆಯ ವ್ಯಾಪ್ತಿ ಏನು ಎಂಬುದನ್ನು ಮತ್ತೆ ಮತ್ತೆ ಹೇಳುತ್ತಲೇ ಇದ್ದೇನೆ. ಸದಸ್ಯರಿಗೆ ಆದಷ್ಟು ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಪ್ರತಿದಿನ ೧೨-೧೪ ಪ್ರಶ್ನೆಗಳಿಗೆ ಸರ್ಕಾರದವರು ಉತ್ತರಗಳನ್ನು ಒದಗಿಸಿಕೊಡುತ್ತಿದ್ದಾರೆ. ತಾವು ಇದನ್ನು ಅರ್ಥಮಾಡಿಕೊಳ್ಳ ಬೇಕು.

ಶ್ರೀ ಧನಂಜಯ ಕುಮಾರ್.—ಸ್ವಾಮಿ, ಸರ್ಕಾರದ ಪರವಾಗಿ ಆಗಿರತಕ್ಕ ಲೋಪವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ವಿದ್ಯಾರ್ಥಿಗಳ ಮುಖ್ಯ ಬೇಡಿಕೆ ಏನೆಂದರೆ ಈ ವಿಶ್ವ

ವಿದ್ಯಾನಿಲಯದ ಆಡಳಿತ ಕಚೇರಿಯು ಮಂಗಳೂರಿನಲ್ಲಿರುವುದಕ್ಕೆ ಬದಲಾಗಿ ಕೊಣಾಜೆಯಲ್ಲೇ ಇರಬೇಕೆಂಬುದು. ಇನ್ನೊಂದು ಬೇಡಿಕೆ ಎಂದರೆ ವಾರ್ಷಿಕ ಬಜೆಟ್ ೨೪೦ ಲಕ್ಷ ರೂ.ಗಳನ್ನು ಅವರು ಕೇಳಿದ್ದರೂ ಸರ್ಕಾರದವರು ಕೇವಲ ೬೦ ಲಕ್ಷ ರೂ. ಮಂಜೂರು ಮಾಡಿರುವುದು...

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರವನ್ನು ತಾವು ಸಭೆಯ ಗಮನಕ್ಕೆ ತಂದಿದ್ದೀರಿ, ಇದನ್ನು ನಾನು ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಪ್ಲಾಂಟೇಷನ್ ಕಾರ್ಮಿಕರ ಮುಷ್ಕರದ ಬಗ್ಗೆ

ಶ್ರೀ ಎಸ್. ಸೂರ್ಯನಾರಾಯಣರಾವ್ (ಪರ್ತ್ಯೂರು).—ಮಾನ್ಯ ಅಧ್ಯಕ್ಷರೆ, ಹಾಸನ ಮತ್ತು ಚಿಕ್ಕಮಗಳೂರಿನ ಕಾಫಿ ಪ್ಲಾಂಟೇಷನ್ ನೌಕರರು ತಮ್ಮ ಸಂಬಳದಲ್ಲಿ ವಿಮರ್ಶಯಾಗಬೇಕು, ಬೆಲೆ ಸೂಚ್ಯಂಕಕ್ಕೆ ಅನುಸಾರವಾಗಿ ತುಟ್ಟಿಭತ್ಯ ಏರಿಸಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಲೇಬರ್ ಇಲಾಖೆಯವರು ಒಂದು ಸಭೆಯನ್ನು ಕೊಡಗಿನಲ್ಲಿ ಕರೆದು ಯಾರು ಮುಷ್ಕರಕ್ಕೆ ನೋಟೀಸ್ ಕೊಟ್ಟಿಲ್ಲ ಅಂಥವರ ಹತ್ತಿರ ಹೋಗಿ ಈ ಮುಷ್ಕರವನ್ನು ನಾವು ವಾಪಸು ತೆಗೆದುಕೊಂಡಿದ್ದೇವೆಂದು ಬರೆಸಿಕೊಂಡು ಬಂದಿದ್ದಾರೆ, ಆದರೆ ಮುಷ್ಕರ ಮಾಡುವುದಾಗಿ ನೋಟೀಸ್ ಕೊಟ್ಟಿರತಕ್ಕ ನಮ್ಮ ಹತ್ತಿರ ಅವರು ಬಂದೇ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ತಾವು ಎಲ್ಲ ಪ್ಲಾಂಟೇಷನ್ ನವರನ್ನೂ ಕರೆಸಿಕೊಂಡು ಈ ಕಾರ್ಮಿಕರ ಬೇಡಿಕೆಯನ್ನು ಈಡೇರಿಸಬೇಕೆಂದು ತಿಳಿಸಿ ಈ ಮುಷ್ಕರವನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEE SAIT (Minister for Labour and Wakf).—Mr. Speaker Sir, I may be permitted to sit and speak.

MR. SPEAKER.—Yes.

SRI AZEEZ SAIT.—Sir, Hon'ble Member Sri Suryanarayana Rao has brought this matter to my notice...

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಅಜೀಜ್ ಸೇಠ್‌ರವರು ಕೂತುಕೊಂಡು ಉತ್ತರವನ್ನು ಕೊಡುತ್ತಿದ್ದಾರೆ. ಅಲ್ಲದೆ ಅವರು ಸದನದ ಹೊರಗಡೆ ಕನ್ನಡದಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ, ಅವರಿಗೆ ಕನ್ನಡ ಬರುತ್ತದೆ, ಆದ್ದರಿಂದ ಕನ್ನಡದಲ್ಲೇ ಅವರು ಉತ್ತರ ಕೊಡುವಂತೆ ತಿಳಿಸಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಪ್ರತಿಯೊಬ್ಬರಿಗೂ ಕನ್ನಡದ ಮೇಲೆ ಅಭಿಮಾನ ಇದೆ. ಕೇವಲ ನಿಮಗೆ ಮಾತ್ರ ಅಲ್ಲ. ಅಲ್ಲದೆ ಯಾರೇ ಆಗಲಿ ಅವರವರ ಮಾತೃಭಾಷೆಯಲ್ಲಿ ಮಾತನಾಡುವುದಕ್ಕೆ ಅಥವಾ ಬೇರೆ ಭಾಷೆಯಲ್ಲಿ ಮಾತನಾಡುವುದಕ್ಕೆ ಕೂಡ ಅವಕಾಶ ಇದೆ. ಇದನ್ನು ತಾವು ತಿಳಿದುಕೊಳ್ಳಬೇಕು. ಇತ್ತೀಚೆಗೆ ತಮ್ಮ ವರ್ತನೆ ಬಹಳವಾಗಿ ಆಗುತ್ತಿದೆ.

SRI AZEEZ SAIT.—Sri Suryanarayana Rao himself is a Member of the Minimum Wage Board and the subject is before them. When I was not in the station my colleague Mr. Raghupathy had a meeting and this requires only legal sanction. I cannot declare the minimum wage *suomoto*. Now, the Minimum Wage Board is seized of the matter. Meanwhile what I did, I want to inform the House. I somehow brought an understanding between the management and the workers, who have got different unions. From December 1983, Rs-9.35, would be paid as minimum wage and Rs.125 would be paid as *ex-gratia* to workers. To this proposal some of the unions have agreed and some of them have not agreed. Therefore, I am convening a meeting again on 24th in my chamber in this regard, and I am confident a settle-